ಸಂ: ಎಂ1/ಎಂಎನ್‌ಜಿ/ಎಂಎಂಎಲ್/ಸಿಆರ್-14/
2021-22

ಅರಣ್ಯ ಸಂರಕ್ಷಣಾಧಿಕಾರಿಗಳ
ಕಾರ್ಯಾಲಯ,
ಬಳ್ಳಾರಿ ವೃತ್ತ, ಬಳ್ಳಾರಿ,
ದಿನಾಂಕ: 10-9-2024.

ಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಅರಣ್ಯ ಸಂರಕ್ಷಣೆ ಹಾಗೂ ನೋಡಲ್ ಅಧಿಕಾರಿ,
(ಎಫ್‌ಸಿಎ) ಬೆಂಗಳೂರು.

ಮಾನ್ಯರೇ,

ವಿಷಯ: Diversion of 22.2887 hectares (Revised from 23.863Ha.) of forest land in Swamymalai Block, Sandur South Range, Sandur Taluka, Ballari District for pipeline Conveyor belt at Subbarayanahalli Iron Ore Mine M.L.No. 2629 in favour of M/s Karnataka State Mineral Corporation Limited (erstwhile Mysore Minerals Ltd.) Bangaluru.
**[PROPOSAL NO. FP/KA/MIN/48923/2020 (FORM-A)]**

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ:ಅಪಜೀ 11 ಎಫ್‌ಎಫ್‌ಎಂ 2024(ಇ) ದಿನಾಂಕ:30-01-2024
2) ತಮ್ಮ ಕಚೇರಿ ಪತ್ರ ಸಂಖ್ಯೆ:ಕೆಎಫ್‌ಡಿ/ಹೆಚ್‌ಓಎಫ್‌ಎಫ್/ಎ5-1 (ಎಂಎನ್‌ಜಿ)/11/2018-ಎಫ್‌ಸಿ ದಿ:08-02-2024 ಮತ್ತು 22-5-2024 (ನೆನಪೋಲೆ ಬರೆದಿರುವುದು)
3) ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವಿಭಾಗ, ಬಳ್ಳಾರಿ ಇವರ ಪತ್ರ ಸಂಖ್ಯೆ:ಎಂ1/ಎಂಎನ್‌ಜಿ/ಕೆಎಸ್‌ಎಂಸಿಎಲ್(ಎಂಎಂಎಲ್)/ಗಗು.2629/2021-22, ದಿ: 26-8-2024.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮೆ॥ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು ಇವರ ಗಣಿ ಗುತ್ತಿಗೆ ಸಂ: 2629ರ ಪ್ರದೇಶಕ್ಕೆ ಕನ್ವೆಯರ್ ಬೆಲ್ಟ್ ಅಳವಡಿಸುವ ಪ್ರಸ್ತಾವನೆ ಕುರಿತು ಉಲ್ಲೇಖಿತ (1)ರ ಸರ್ಕಾರದ ಪತ್ರದಲ್ಲಿ ಈ ಕೆಳಕಂಡ ಮಾಹಿತಿಯನ್ನು ಸಲ್ಲಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ.

ಈ ಕುರಿತು ತಮ್ಮ ಕಚೇರಿಯ ಉಲ್ಲೇಖಿತ (2)ರ ದಿನಾಂಕ: 08-2-2024ರ ಪತ್ರದಲ್ಲಿ ಉಲ್ಲೇಖಿತ(1)ರ ಸರ್ಕಾರದ ಪತ್ರದಲ್ಲಿ ತಿಳಿಸಿದ ಮಾಹಿತಿಯನ್ನು ಸಲ್ಲಿಸುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ಇವರಿಗೆ ಸೂಚನೆಯನ್ನು ನೀಡಲಾಗಿದ್ದು, ತದ ನಂತರ ದಿನಾಂಕ: 22-5-2024ರ ಪತ್ರದಲ್ಲಿ ಸರ್ಕಾರದ ಪತ್ರದಲ್ಲಿ ಸೂಚಿಸಿದಂತೆ, ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಒದಗಿಸುವ ಜಮೀನಿನ RF/PF ಆಗುವುದು ಬಾಕಿ ಇರುವುದಕ್ಕೆ, RoFR ಪ್ರಮಾಣ ಪತ್ರ ಸಲ್ಲಿಸುವುದು ಮತ್ತು NPV ಮೊತ್ತವನ್ನು ಪಾವತಿಸುವುದು ಬಾಕಿ ಇರುವ ಕುರಿತು ಮಾಹಿತಿಯನ್ನು ಗಣಿ ಗುತ್ತಿಗೆದಾರರಿಂದ ಪಡೆದು ಸಲ್ಲಿಸುವಂತೆ ಮತ್ತೊಮ್ಮೆ ಸೂಚನೆಯನ್ನು ನೀಡಲಾಗಿರುತ್ತದೆ.

ಅದರಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ಇವರು ಈ ಕೆಳಗಿನಂತೆ ಅಂಶವಾರು ಮಾಹಿತಿಯನ್ನು ಉಪಯೋಗಿ ಸಂಸ್ಥೆಯವರಿಂದ ಪಡೆದು ಪರಿಶೀಲಿಸಿ, ಉಲ್ಲೇಖಿತ (3)ರ ಪತ್ರದಲ್ಲಿ ಈ ಕಚೇರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

| ಕ್ರ.ಸಂ. | ಕೋರಿರುವ ಅಂಶಗಳು | ಸಲ್ಲಿಸಲಾಗಿರುವ ಮಾಹಿತಿ |
|---|---|---|
| 1. | ಅರಣ್ಯೀಕರಣಕ್ಕಾಗಿ ಒದಗಿಸುವ ಜಮೀನಿನ RF/PF ಆಗುವುದು ಬಾಕಿ ಇರುತ್ತದೆ. | ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಒದಗಿಸಿರುವ ಪ್ರದೇಶ ಅಂದರೆ ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲೂಜಿನ ಕುಡುತಿನ ಗ್ರಾಮ ಸ.ನಂ. 1251ರ ಪ್ರದೇಶವು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ: ಅಪಜೀ 79 ಎಫ್ಎಫ್ 2024 ದಿನಾಂಕ: 19-7-2024ರಲ್ಲಿ ಕರ್ನಾಟಕ ಅರಣ್ಯ ಕಾಯ್ದೆ, 1963ರ ಕಲಂ 33ರಡಿಯಲ್ಲಿ "ರಕ್ಷಿತ ಅರಣ್ಯ" ವೆಂದು ಘೋಷಣೆಯಾಗಿರುತ್ತದೆ (ಅನುಬಂಧ-1ರಲ್ಲಿ ಲಗತ್ತಿಸಿದೆ). |
| 2. | RoFR ಪ್ರಮಾಣ ಪತ್ರ ಸಲ್ಲಿಸುವುದು | ಈ ಕುರಿತು ಮೆ: ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ಇವರು RoFR ಪ್ರಮಾಣ ಪತ್ರವನ್ನು ಪಡೆಯಲು ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ದಿನಾಂಕ: 18-3-2022ರಂದು ಮನವಿಯನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ (ಪ್ರತಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ). |
| 3. | NPV ಮೊತ್ತವನ್ನು ಪಾವತಿಸುವುದು ಬಾಕಿ ಇರುತ್ತದೆ. | ಈ ಕುರಿತು ಮೆ: ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ಇವರು ಸದರಿ ಕನ್ವೆಯರ್ ಬೆಲ್ಟ್ 22.2887 ಹೆಕ್ಟರ್ ಪ್ರದೇಶದ ಪ್ರಸ್ತಾವನೆಯು ಸ್ಟೇಜ್-1 ಅನುಮೋದನೆಯಾದ ನಂತರ ಅರಣ್ಯ ಇಲಾಖೆಯಿಂದ ಡಿಮ್ಯಾಂಡ್ ನೋಟ್ ಪಡೆದ ನಂತರ NPV ಮೊತ್ತವನ್ನು ಪಾವತಿಸುವುದಾಗಿ ತಿಳಿಸಿರುತ್ತಾರೆ (ಅನುಬಂಧ-3ರಲ್ಲಿ ಲಗತ್ತಿಸಿದೆ). |

ಆದ್ದರಿಂದ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ಇವರ ಪತ್ರದ ಪ್ರತಿ ಹಾಗೂ ಅದರೊಂದಿಗಿನ ಅನುಬಂಧಗಳ ಪ್ರತಿಗಳನ್ನು ತ್ರಿಪ್ರತಿಯಲ್ಲಿ ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ದಯಾಪರ ಅವಗಾಹನೆಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ನಂಬುಗೆಯ,

ಅರಣ್ಯ ಸಂರಕ್ಷಣಾಧಿಕಾರಿ,
o/c ಬಳ್ಳಾರಿ ವೃತ್ತ, ಬಳ್ಳಾರಿ.

ಪ್ರತಿಯನ್ನು:

1) ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವಿಭಾಗ, ಬಳ್ಳಾರಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2) ಮೆ॥ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್, TTMC "A" Block, 5th Floor, BMTC Building, KH Road ಬೆಂಗಳೂರು -560 002 ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.